
ಸಹವರ್ತಿಗಳನ್ನು ಅತ್ಯಂತ ಮಾನವೀಯತೆಯಿಂದ ನೋಡಿಕೊಳ್ಳುವ ರೀತಿಯನ್ನು ಅಬ್ದುಲ್ ಮೆಚ್ಚಿಕೊಂಡಿದ್ದು, ಇಮ್ರಾನ್ ಹಶ್ಮಿಯ ಒರಟುತನದಿಂದ ಅಷ್ಟೇ ಬೇಸರಪಟ್ಟುಕೊಂಡಿದ್ದು, ಆ ಕತೆಗಳ ಹೈಲೈಟ್ಸ್. ಕೇಪ್ ಆಫ್ ಗುಡ್ ಹೋಪ್‌ನಲ್ಲಿ ನಾವು ಫೋಟೊ ತೆಗೆಸಿಕೊಂಡಾದ ಮೇಲೆ ಅಲ್ಲಿನ ಒಂದು ಉರುಟಾದ ಕಲ್ಲನ್ನು ಆಯ್ದುಕೊಂಡೆ. ನನ್ನ ಕಲ್ಲಿನ ಸಂಗ್ರಹದಲ್ಲದು ಸೇರಿಕೊಂಡಿತು.

ಗುಡ್ಡವನ್ನು ಸುತ್ತು ಬಳಸಿ ಕರೆದುಕೊಂಡು ಹೊರಟ ಅಬ್ದುಲ್, ತನ್ನ ಪಾಡಿಗೆ ತಾನು ಕಾಳು ಕಡ್ಡಿ ತಿನ್ನುತ್ತಾ ಇದ್ದ ಬೃಹತ್ ಆಸ್ಟ್ರಿಚ್ ಹಕ್ಕಿಯನ್ನು ತೋರಿಸಿದ. ಆಸ್ಟ್ರಿಚ್ ನೋಡಿ ಮರಳುವಾಗ ಒಂದು ಗುಡ್ಡದಿಂದ ಇನ್ನೊಂದು ಗುಡ್ಡಕ್ಕೆ ಹೊರಟಿದ್ದ ವಾನರ ಮಿತ್ರ ಬಬೂನ್ ಕಾಣಿಸಿದ. ಇದು ಬಬೂನ್‌ಗಳ ರಕ್ಷಿತಾರಣ್ಯ. ಅವುಗಳು ಮನುಷ್ಯರ ಮೇಲೆ ದಾಳಿ ಮಾಡುತ್ತಾರೆ ಎಂಬ ಕಾರಣಕ್ಕೆ 'ಅವುಗಳಿಗೆ ತಿನ್ನಲೇನೂ ಕೊಡಬೇಡಿ; ಅವುಗಳೆದುರು ತಿಂಡಿ ತಿನಿಸು ತೋರಿಸಬೇಡಿ' ಎಂದು ಎಲ್ಲೆಡೆ ಬೋರ್ಡ್ ಹಾಕಿದ್ದಾರೆ. ಸಂಜೆ ನಾವು ಅಲ್ಲಿನ ಪ್ರಸಿದ್ಧ ಹಾರ್ಬರ್ ಫ್ರಂಟ್‌ನಲ್ಲಿ ಓಡಾಡಿ ಊಟ ಮಾಡಿ ಮರಳಿದೆವು.

ಬೆಳಿಗ್ಗೆ ಮತ್ತೆ ಅಬ್ದುಲ್ ನಮ್ಮನ್ನು ಕರೆದೊಯ್ಯಲು ಬಂದು ನಿಂತಿದ್ದ. 'ತಾನು ಒಮ್ಮೆಯಾದರೂ ಭಾರತ ನೋಡಬೇಕು' ಎಂಬುದು ಆತನ ಮನದಾಳದ ಆಸೆ. 'ಖಂಡಿತಾ ನೋಡುತ್ತೀರಿ ಬಿಡಿ, ಅದೇನು ಮಹಾ' ಎಂದು ಉತ್ಸಾಹ ತುಂಬಲು ಯತ್ನಿಸಿದರೂ ನಮಗೆ ಒಳಗೊಳಗೇ ತಳಮಳ.

ಸಿಂಹದ ಮುಖದಂತಿರುವ ಗುಡ್ಡದ ತುದಿಯಿಂದ ಬೆನ್ನಿಗೆ ದೈತ್ಯ ಗಾತ್ರದ ಬಲೂನ್ ಕಟ್ಟಿಕೊಂಡು ಹಾರುವ ಪ್ಯಾರಾಗ್ಲೈಡಿಂಗ್ ನೋಡಲು ಮಜವಾಗಿತ್ತು. ಅದನ್ನು ಮಾಡುವ ಧೈರ್ಯ ಮಾತ್ರ ನನಗೆ ಬರಲಿಲ್ಲ.


ಪ್ಯಾರಾಗ್ಲೈಡ್

ರಾಬಿನ್ ಐಲ್ಯಾಂಡ್‌ನಲ್ಲಿ ನೆಲ್ಸನ್ ಮಂಡೇಲಾರನ್ನು ಇಟ್ಟಿದ್ದ ಕಾರಾಗೃಹವಿದೆ. ಅಲ್ಲಿಗೆ ಹೋಗಲು ಟಿಕೆಟ್ ಸಿಗಲಿಲ್ಲ. ನಾವು ನಿರಾಶರಾಗುವ ಮೂಡಿನಲ್ಲೇ ಇರಲಿಲ್ಲ. ಟೇಬಲ್ ಮೌಂಟನ್ ನಮ್ಮ ಹೋಟೆಲ್ ರೂಮಿನ ಎದುರಿನಲ್ಲೇ ಇತ್ತು. ಮೂರನೇ ದಿನ ನಾವದರ ತುದಿಯೇರಿ ಅಲ್ಲಿಂದ ಕಾಣುವ ಕೇಪ್ ಟೌನಿನ ವಿಹಂಗಮ ಪಕ್ಷಿನೋಟ ಸವಿದೆವು. ನಾಲ್ಕೂ ದಿಕ್ಕಿನಲ್ಲಿ ಆವರಿಸಿದ ಸಮುದ್ರ, ಬೆಟ್ಟದ ಮೇಲೆ ಬೆಳೆದ ತರ ತರದ ಕಾಡು ಕಳ್ಳಿಗಳು, ಕಲ್ಲಿನ ಪೊಟರೆಗಳು... ಅಬ್ಬಾ! ಕೇಪ್ ಟೌನ್ ಪ್ರಕೃತಿಪ್ರಿಯರ ಕಾಶಿ.


ಆಸ್ಟ್ರಿಚ್



ಬಬೂನ್

ಅಲ್ಲಿಂದ ಸುಮಾರು ಎರಡೂವರೆ ತಾಸು ದೂರದಲ್ಲಿರುವ ಹರ್ಮಾನಿಸ್ ಎಂಬಲ್ಲಿಗೆ ಡ್ರೈವ್ ಹೋದೆವು. ನನಗೆ ಬರೀ ಸುತ್ತಮುತ್ತಲ ದೃಶ್ಯ ನೋಡಿಯೇ ತೃಪ್ತಿಯಾಗಿತ್ತು. ಆದರೆ ನನ್ನ ಮಗಳಿಗೆ ದೋಣಿಯಲ್ಲಿ ಸಮುದ್ರದೊಳಕ್ಕೆ ಹೋಗಿ ನೀಲಿ ತಿಮಿಂಗಿಲಗಳನ್ನು ನೋಡುವ ತವಕ. ನಾವೆಷ್ಟೇ ಪ್ರಯತ್ನಿಸಿದರೂ ಪ್ರತಿಕೂಲ ಹವಾಮಾನದ ಕಾರಣ ಅವಳ ಅದೊಂದು ಆಸೆ ನೆರವೇರಲಿಲ್ಲ. ವೇಲ್ ವಾಚಿಂಗ್ ಅಲ್ಲಿನ ಜನರಿಗೂ ಪ್ರಿಯವಾದದ್ದಿರಬೇಕು. ಟೂರಿಸ್ಟ್‌ಗಳಿಗಿಂತಲೂ ಸ್ಥಳೀಯ ಬಿಳಿ ಜನರೇ ಹೆಚ್ಚು ಜಮಾಯಿಸಿದ್ದರು. ಅಲ್ಲಿನ ಸುತ್ತಮುತ್ತಲ ಪ್ರದೇಶ ತುಂಬಾ ತುಂಬಾ ಸುಂದರವಾಗಿದೆ. ವಾಪಸ್ ಬರುವಾಗ ಬೆಟ್ಟೀಸ್ ಬೇ ಎಂಬಲ್ಲಿ ಮೊಟ್ಟೆ ಮರಿಗಳೊಡನೆ ಸುಖಿಸುತ್ತಿದ್ದ ಪುಟ್ಟ ಪೆಂಗ್ವಿನ್‌ಗಳನ್ನು ಮತ್ತು ನೆಲದ ಮೇಲೆ ಹಬ್ಬಿ ನಿಂತ ಅವುಗಳ ಪೊಟರೆಗಳನ್ನು ನೋಡಿ ಸಂತಸವಾಯಿತು.

ಸಂಜೆ ಕೇಪ್ ಟೌನಿನಲ್ಲಿರುವ ಮಲಯ್ ಕಾಲೋನಿಗೆ ಹೋಗಿಬಂದೆವು. ಕೇಪ್ ಮಲಯ್ ಎಂಬಲ್ಲಿ ಮಿನಿ ಮಲೇಷ್ಯಾವನ್ನು ಸೃಷ್ಟಿಸಿಕೊಂಡು ಬಣ್ಣ ಬಣ್ಣದ ಮನೆಗಳಲ್ಲಿ ವಾಸಿಸುವ ಮಲಯ್ ಜನರನ್ನು, ಅಲ್ಲಿನ ಬೇರೆಯದೇ ಅನುಭೂತಿಯನ್ನು ನೋಡಿ ವಿಸ್ಮಯವಾಯಿತು.

ಆ ಊರಿಗೆ ಬಂದ ನಾಲ್ಕನೇ ದಿನ ಬೆಳಿಗ್ಗೆ ಕೇಪ್ ಟೌನಿಗೆ, ದಕ್ಷಿಣ ಆಫ್ರಿಕಾಕ್ಕೆ ವಿದಾಯ ಹೇಳಿ ಮರಳಿ ಮನೆಗೆ ಹೊರಟಾಗಿತ್ತು. ಹತ್ತು ದಿನಗಳು ಹತ್ತು ಗಂಟೆಗಳಷ್ಟು ಬೇಗನೆ ಕಳೆದುಹೋಗಿತ್ತು. ಮನಸ್ಸು ಮೃಗಾಲಯವಾಗಿತ್ತು. ಕಣ್ಣೆದುರು ಕಂಡ ದೃಶ್ಯಗಳನ್ನೆಲ್ಲ ಮನಸ್ಸಿನ ಮೆಮೊರಿ ಕಾರ್ಡ್‌ನಲ್ಲಿ ಸೇವ್ ಮಾಡಿಕೊಳ್ಳುತ್ತ ಊರ ದಾರಿ ಹಿಡಿದೆವು.